
ಮಾಮೂಲಿ ಮಾತುಗಳಿವೆ. ಹೊಸಬರು 'ಮುರಿಯುವುದು' ಸರಿ, ಆದರೆ 'ಕಟ್ಟುವಲ್ಲಿ' ಯಶಸ್ವಿಯಾಗಬೇಕು. ಇದಕ್ಕೆ ತಮ್ಮ ಅನುಭವಕ್ಕೆ ಬಂದ ಲೋಕವೇ ಆಗಿದ್ದರೆ ಒಳಿತು. ಹಾಗಾಗಿಯೇ ನನಗೆ ಗೋವಿಂದರಾಜು ಅವರ 'ಮೆಚ್ಚನಾ ಪರಮಾತ್ಮನು', 'ಉಸಿರಿನ ಪರಿಮಳವಿರಲು...' ಕಥೆಗಳಿಗಿಂತ 'ನಕ್ಷತ್ರಕ್ಕಂಟಿದ ಮುಟ್ಟಿನ ನೆತ್ತರು', 'ಯಾಕಾಶಿ ಮಣೇವು', 'ಸ್ವರ್ಗದ ಹೂಗಳು' ಕಥೆಗಳು ವಸ್ತುವಿನ ದೃಷ್ಟಿಯಿಂದ ಹೊಸತನವನ್ನು ಅಭಿವ್ಯಕ್ತಿಸುವಂತೆ ಕಾಣುತ್ತವೆ. ಈ ಕಥೆಗಳ ಒಳಲೋಕದಲ್ಲೇ ಸದ್ಯದ ಮೌಖಿಕತನವಿದೆ; ಕುಣಿಗಲ್ ಪ್ರಾಂತ್ಯದ ಶಕ್ತಿದೇವತೆಗಳು, ಆಚರಣೆಗಳು ಪಾತ್ರಗಳಿಗೆ ಜೀವ ತುಂಬಬಲ್ಲವು. ಜೊತೆಗೆ ವರ್ತಮಾನದ ಸುಡುವ ಸತ್ಯಗಳಿಂದಾಗಿ ಇವು ಮುಖ್ಯವಾಗುತ್ತವೆ. ಜಾತಿಯ ಕ್ರೂರತೆಗಳಿದ್ದರೂ ನಿಭಾಯಿಸುವ ಗುಣ ಗಟ್ಟಿಯಾಗಿದೆ. ಇಲ್ಲಿನ ಗ್ರಾಮಗಳು ಜಾತಿಯಿಂದಾಗಿಯೇ ಬಿರುಕುಗೊಂಡ ಗೋಡೆಗಳಂತೆ ಕಾಣುತ್ತವೆ. ಆದರೆ, ಹೆಣ್ಣು ಮತ್ತು ದಲಿತ ಜೀವಗಳ ಭಾವುಕತೆಯಿಂದಾಗಿ ಬದುಕಿಗೊಂದು ಅರ್ಥ ಸಿಕ್ಕಿದೆ. ಮುಖ್ಯವಾಗಿ ಇಲ್ಲಿನ ಗೌಡನ ಬದುಕು ಬದಲಾದಂತೆ ಕಂಡಿದೆ. ತೊಂಬತ್ತರ ದಶಕದ ಕಥನದ ಗೌಡ ವಿವೇಕರಹಿತನಾಗಿದ್ದ; ದಬ್ಬಾಳಿಕೆಯ ಸಂಕೇತವೂ ಆಗಿದ್ದ. ಇಲ್ಲಿ ಕೆಳಜಾತಿಗಳ ತಾಳ್ಮೆ ಮತ್ತು ಪ್ರೀತಿಯಿಂದ ಗೌಡನ ಕ್ರೌರ್ಯ ತಲೆತಗ್ಗಿಸಿದೆ. ಈ ಕ್ರಮವನ್ನು ಗೋವಿಂದರಾಜು ಮುಂದೆ ಹೇಗೆ ನಿಭಾಯಿಸಬಲ್ಲರು? ನೋಡಬೇಕು. ಹಳ್ಳಿಯ ಒಳ ಚಿತ್ರಗಳು ಬಿಡುಬೀಸಾಗಿ ಬರದೇ, ಗಾಂಭೀರ್ಯವನ್ನು ಉಳಿಸಿಕೊಂಡಿರುವುದು ಇವರ ಕಥೆಗಳ ಶಕ್ತಿ. ಸಾಂಸ್ಕೃತಿಕ ಸಂಗತಿಗಳು ರಾಜಕಾರಣವನ್ನು ಆವರಿಸುವಾಗಲೂ ಜಾತಿಯ ಕರಾಳಮುಖಗಳು ಮತ್ತೆ ಎದ್ದುಬರುತ್ತವೆ. ಈ ಕಥೆಗಾರ ನೆನಪಿನಲ್ಲಿಡಬೇಕಾದ ಸಂಗತಿಗಳು: ಕಥೆಯೊಳಗೆ ತಾತ್ವಿಕತೆ ಬರಬೇಕಾದರೆ ಗಾಂಧಿ-ಅಂಬೇಡ್ಕರ್ ಪಟಗಳನ್ನು ತರಲೇಬೇಕು ಅಂತೇನಿಲ್ಲ, ಅವರ ನೆರಳಿದ್ದರೂ ಸಾಕು. ಕಥೆಗೆ ಬೇಕಾಗುವ ನಿರೂಪಣಾ ನುಡಿಗಟ್ಟುಗಳನ್ನು ರೂಢಿಸಿಕೊಳ್ಳುವ ಅಗತ್ಯವಿದೆ. ಹಲವು ಬಾರಿ ಪಾತ್ರಗಳಿಗೂ ವಸ್ತುವಿಗೂ ಸಾತತ್ಯ ಇರುವುದೇ ಇಲ್ಲ. ಈ ಎಲ್ಲದರ ಅರ್ಥ ಅವರು ಕಥಾರಚನೆಯಲ್ಲಿ ಮಾಗಬೇಕಾಗಿದೆ.






ಮೌಖಿಕ ತಂತ್ರ ಮತ್ತು ವಸ್ತುವಿನ ಪ್ರಯೋಗಶೀಲತೆಯ ಗಟ್ಟಿತನದಿಂದಾಗಿ ರಶ್ಮಿ ಅವರ 'ನಡ್ಲುಮನೆ' ಗಮನಿಸಬೇಕಾದ ಕಥೆ. ಗ್ರಾಮದ ಛಿದ್ರತೆಯ ಜೊತೆಗೆ ತಲೆಮಾರುಗಳ ಭಿನ್ನತೆ ಮತ್ತು ಪರಿವರ್ತಿತ ಬದುಕಿನ ನೋಟಗಳನ್ನು ಈ ಕಥೆ ಅಭಿವ್ಯಕ್ತಿಸುತ್ತದೆ. ಇದೇ ವಸ್ತುವನ್ನು ರೂಢಿಗತವಾಗಿ ನಿರೂಪಿಸಿದ್ದರೆ ಕಥೆ ತಟ್ಟುತ್ತಿರಲಿಲ್ಲ. ಮರ ಮತ್ತು ಮನೆಗಳೇ ಇಲ್ಲಿ ಕಥೆಯನ್ನು ನಡೆಸಿದ್ದರಿಂದ ಹಾಗೂ ಭಾಷೆಯ ತಾಜಾತನದಿಂದ ಮುಖ್ಯವಾಗಿದೆ.

ಮೌಖಿಕ ತಂತ್ರವನ್ನು ತಮ್ಮ ಮೊದಲ ಕಥೆಗಳಲ್ಲೇ ಶಕ್ತಿಯುತವಾಗಿ ಬಳಸಲು ಯತ್ನಿಸುತ್ತಿರುವ ಸಂಗನಗೌಡ ತಮ್ಮ ಇತಿಮಿತಿಯಲ್ಲಿ ಕಥೆಯ ಒಡಲನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದಾರೆ. ಉತ್ತರಕರ್ನಾಟಕದ ಪ್ರಾದೇಶಿಕ ನುಡಿಗಟ್ಟುಗಳನ್ನು ಕಥೆಯ ವಸ್ತುವಿಗೆ ತಕ್ಕಂತೆ ಬಳಸಬಲ್ಲರು. ನೆಲಕ್ಕೆ ಅಂಟಿಕೊಂಡ ಅವಧೂತರ ದಾರಿಗಳು; ಜನಪದ ಜಗತ್ತಿನ ಲಯಗಳು

